ನನ್ನನ್ನು ಸಹ್ಯವೆನ್ನುತ್ತಾನೆ. ನನ್ನ ಆಕೃತಿ ಅವನು ತೊಡುವ ಮಾಲೆಯ ಒಂದು ಪುಷ್ಪವಾಗುತ್ತದೆ. ನನ್ನ ಭಾವನೆಗಳು ಯಾಕೆ ಹೀಗೆ ಬದಲಾದವೋ? ಆ ಸೊಡರಿನಲ್ಲಿ ಕಲೆತುಬಿಡಲು ಬಯಸುತ್ತೇನೆ. ಒಂದು ಜನ್ಮಕ್ಕೆ ಬೇಕಾದ ಸುಖವನ್ನು ಪಡೆದು, ಇನ್ನು ಜನ್ಮ ಬೇಡವೆಂದು ಅಂದುಕೊಂಡಿದ್ದೇನೆ. ಕನಸಿನ ಬಯಲಿನಲ್ಲಿ ಅಳುತ್ತ ಕೂಗುತ್ತಿದ್ದೇನೆ. ಯಾವುದೋ ಒಂದು ಕೈ ನನ್ನನ್ನು ಸೊಂಟದಿಂದ ಕೆಳಗಿಳಿಸುವ ಮಗುವಿನಂತೆ ಕೆಳಗೆ ಇಳಿಸುತ್ತದೆ. ನಾನು ಅತ್ತು ಕರೆದು ನನ್ನ ಕೋರಿಕೆಯನ್ನು ಮುಂದಿಡುತ್ತೇನೆ. ಮರುಕದಿಂದ ಆ ಕೈ ನನ್ನ ಕಡೆ ಮತ್ತೆ ಚಾಚುತಿದೆ. ನನ್ನನ್ನು ಎತ್ತಿಕೊಳ್ಳುತ್ತದೆ. ಆ ಸೊಡರಿನಲ್ಲಿ ಕಲೆತು ಬೆಳಗಾಗುತ್ತೇನೆ…”

“ಸಾಕು, ಆಂಡಾಳ್, ಸಾಕು” ಪೆರಿಯಾಳ್ವಾರ್ ಗಾಬರಿಯಿಂದ ಎದ್ದರು. ಮಗಳನ್ನು ತಬ್ಬಿಕೊಂಡರು. “ಇನ್ನು ನಾನು ಏನನ್ನೂ ಕೇಳುವುದಿಲ್ಲ, ಮಗಳೇ. ಶಾಂತವಾಗಿರು. ನಿನ್ನ ಮನದ ಆವೇಶ ತಣಿಯಲಿ” ಅವರ ಕಣ್ಣು ಅತಿ ವಿಸ್ಮಯದಿಂದ ಅಂಗಳದ ಮೂಲೆಯಲ್ಲಿದ್ದ ನಾರಾಯಣನ ಪ್ರತಿಮೆಯನ್ನು ನೋಡಿತು. “ಇದು ಹೇಗೆ ಸಾಧ್ಯವಾಯಿತು? ಈ ಸಣ್ಣ ಮಗುವಿಗೆ ಯಾಕೆ ಹೀಗೆಲ್ಲಾ ಪರೀಕ್ಷಿಸುವೆ ದೇವರೇ” ಅವರು ನಿಟ್ಟುಸಿರುಬಿಟ್ಟರು. ಬಹುಶಃ ಆಂಡಾಳಿನ ಮನಸ್ಸು ಗೊಂದಲಕ್ಕೆ ಒಳಗಾಗಿರಬಹುದೇ. ಹಾಗೆ ಯೋಚಿಸಲು ತೊಡಗಿದಕೂಡಲೆ ಭಯದಿಂದ ಹೆಪ್ಪುಗಟ್ಟಿತು ಅವರ ಮನಸ್ಸು. ಇಂತಹ ಮಾತುಗಳೇ ಹುಚ್ಚಿನ ಮೊದಲ ಸೂಚನೆಯೋ ಎಂಬ ಪ್ರಶ್ನೆ ಎದ್ದಾಗ ಕೆಳಹೊಟ್ಟೆಯಲ್ಲಿ ಒಂದು ಬೆಂಕಿಯ ಕಿಡಿ ಉಂಟಾಯಿತು.

“ಎಂತಹ ಮುಟ್ಠಾಳತನ” ಎಂದು ಮನಸ್ಸನ್ನು ನಿಗ್ರಹಿಸಿದರು. ಆಂಡಾಳ್ ಅದೃಷ್ಟವಂತೆ. ಪ್ರತಿಕ್ಷಣವೂ ನಾಲಿಗೆಯಿಂದ ಸ್ತುತಿಸುವ ತನಗೆ ದಯೆ ಪಾಲಿಸದ ಕೃಷ್ಣ ಸಣ್ಣ ಮಗುವಿಗೆ ದಯೆ ತೋರಿ ಆಟವಾಡುತ್ತಿದ್ದಾನೆ ಎಂದು ಅಂದುಕೊಂಡರು.



“ತಂದೆಯೇ, ನಿನ್ನೆ ರಾತ್ರಿ ನಾನು ಒಂದು ಹಾಡನ್ನು ಬರೆದಿದ್ದೇನೆ” ಎಂದು ಕುತೂಹಲದಿಂದ ಹೇಳುತ್ತಾ ಆಂಡಾಳ್ ಮಾತಿನ ದಿಕ್ಕನ್ನು ತಿರುಗಿಸಿದಳು.

“ಹಾಡೇ?” ಆಶ್ಚರ್ಯದಿಂದ ಕೇಳಿದರು ಪೆರಿಯಾಳ್ವಾರ್.

“ಹೌದು ಅಪ್ಪ. ನೀವು ಕೃಷ್ಣನ ಮೇಲೆ ರಾಶಿರಾಶಿಯಾಗಿ ಬರೆದಿಟ್ಟಿದ್ದೀರಲ್ಲಾ, ಹಾಗೆಯೇ ನಿನ್ನೆ ನಿದ್ದೆಮಾಡುತ್ತಿದ್ದೆ, ಏನೋ ಒಂದು ವ್ಯಥೆ. ನಿಮ್ಮ ತಾಳೆಯಗರಿಯೊಂದರಲ್ಲೇ ಬರೆದಿರುವೆ. ತೋರಿಸಲೇ?'' ಮುದ್ದಾದ ದನಿಯಲ್ಲಿ ಕೇಳಿದಳು.

“ತೋರಿಸು ನೋಡೋಣ” ಪೆರಿಯಾಳ್ವಾರಿಗೆ ವಿಚಿತ್ರವಾಗಿ ಕಂಡಿತು. ಆಗಾಗ ಬರೆಯುವ ಹಾಡುಗಳನ್ನು ಪ್ರತಿ ತೆಗೆಯಲು, ತಾಳೆಗರಿಗಳನ್ನು ಜೋಡಿಸಿ ಕಟ್ಟಿಡಲು ಅವಳು ನೆರವಾಗುವಳು. ಸ್ವಂತವಾಗಿ ಹಾಡು ಕಟ್ಟುವಷ್ಟು ಬೆಳೆದಿರುವುದು ಆಶ್ಚರ್ಯವಾಗಿತ್ತು. ಕೋಣೆಯೊಳಗೆ ಹೋದ ಆಂಡಾಳ್, ಸ್ವಲ್ಪ ಸಮಯದ ನಂತರ ಒಂದು ತಾಳೆಗರಿಯೊಂದಿಗೆ ಬಂದಳು.

“ನೋಡಿ, ಅಪ್ಪ” ಆಸಕ್ತಿಯಿಂದ ತೋರಿಸಿದಳು.

“ನೀನೇ ಓದು ಮಗಳೇ.”

ಓದಲು ತಯಾರಾಗುವಂತೆ ಆಂಡಾಳ್ ತಾಳೆಗರಿಯನ್ನು ಸರಿಮಾಡಿಕೊಂಡಳು. ತಕ್ಷಣ ಪೆರಿಯಾಳ್ವಾರ್ ಕಡೆಗೆ ತಿರುಗಿ, “ಅಪ್ಪ, ನಿಮ್ಮಷ್ಟು ಪಾಂಡಿತ್ಯ ಇಲ್ಲ ನನಗೆ. ಕೇವಲ ಹೂಕಟ್ಟುವ ಜ್ಞಾನವಷ್ಟೆ. ಪದಗಳನ್ನು ತೋಚಿದಂತೆ ಪೋಣಿಸಿದ್ದೇನೆ. ಕೇಳಿ ನಗಬಾರದು” ಎಂದು ಆಜ್ಞೆ ಮಾಡುವಂತೆ ಹೇಳಿ ಗೊಣಗಿದಳು. ಕೆಂಪಾದ ಅವಳ ಕೆನ್ನೆಗಳಿಗೆ ನಾಚಿಕೆಯ ಕೆಂಪೂ ಸೇರಿ ಹೆಚ್ಚಾಯಿತು.

ಮಾರ್ಘಶಿರ ತಿಂಗಳಲಿ ಚಂದ್ರ ತುಂಬಿದೀ
ಶುಭದಿನಗಳಲಿ
ಮೀಯ ಬಯಸುವರೆಲ್ಲ ಹೊರಡಿರೈ ಅಂದ
ಭೂಷಣೆಯರೇ
ಐಸಿರಿಯು ತುಂಬಿರುವ ಗೋಕುಲದ ಅಂದ
ಕಿರುಬಾಲೆಯರೇ
ಹರಿತ ಶೂಲವ ಹಿಡಿದು ದುಷ್ಟ ನಿಗ್ರಹ ನಿರತ
ನಂದಗೋಪನ ಮಗನ
ಕಾಂತಿ ತುಂಬಿಹ ಕಣ್ಣು ಯಶೋದೆಯಾ ಮರಿ
ಸಿಂಹದಂತಿರುವ